(ಇ) ರೈತರಿಗೆ ಖಾತೆ ಮಾಡಿಕೊಡುವ ಬಗ್ಗೆ.

+ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):– ಅಧ್ಯಕ್ಷರೇ, ಇದು ಜಮೀನಿನ ಬೀಳಿನ ವಿಷಯ. ಒಂದು ಕಟಾಫ್ ಡೇಟ್‌ನ್ನು ಮಾಡಿದ್ದರು. 31-3-1992ನೇ ಇಸ್ವಿಗೆ ಮೊದಲು ಯಾವ ಯಾವ ಪಡ ಆಗಿದೆ, ಆ ಜಮೀನನ್ನು ಕಂದಾಯ, ಇನ್ನುಳಿದ ಯಾವುದೇ ಬಾಕಿಯನ್ನು ಕಟ್ಟಿ ಪಡಾ ವಜಾ ಮಾಡಿಸಿಕೊಂಡು ಖಾತೆ ಮಾಡಿಸಿಕೊಳ್ಳಬೇಕೆಂದು ನಿಯಮ ಇದೆ.

ಈ ಸರ್ಕಾರ ಬಂದಮೇಲೆ 31-7-1995ನೇ ಇಸ್ವಿಯನ್ನು ಕಟಾಫ್ ಡೇಟ್ ಎಂದು ಫಿಕ್ಸ್ ಮಾಡಿದರು. ಆದರೆ ಕಂದಾಯ ಬಾಕಿಯನ್ನು ಕಟ್ಟಿ, ಪಡೆದ ಬಗ್ಗೆ ಎಲ್ಲಾ ಮಾಹಿತಿಯನ್ನು ಕೊಟ್ಟು, ಒಂದು ಡೇಟ್ ಫಿಕ್ಸ್ ಮಾಡಿದರು 18-7-1995. ವಿಲೇಜ್ ಅಕೌಂಟೆಂಟಿಗೆ ದಿನಾಂಕ: 15-8-1995 ರೊಳಗೆ ಕೊಡಬೇಕೆಂದು ಆದೇಶ ಕೊಟ್ಟಿದ್ದರು. ಆದನ್ನು ಅವರು ತಹಸೀಲ್ದಾರ್‌ಗಳು 31-8-1995ನೇ ಇಸ್ವಿಯಲ್ಲಿ ಯಾವ ಯಾವ ಕೇಸಸ್ ಇವೆ ಅದನ್ನು ಉಪ ವಿಭಾಗಾಧಿಕಾರಿಗಳಿಗೆ ಕೊಡಬೇಕೆಂದು ಮಾಡಿದರು. ಉಪ ವಿಭಾಗಾಧಿಕಾರಿಗಳು 15-9-1995 ರೊಳಗೆ ಜಿಲ್ಲಾಧಿಕಾರಿಗಳಿಗೆ ಕೊಡಬೇಕೆಂದು ಹೇಳಿದರು. ಈ ಕಾರ್ಯಕ್ರಮ ಡಿಲೇಯಾಗಿ ಯಾವುದೇ ರೀತಿಯ ಕಾರಣಕ್ಕಾಗಿ ಆಯಾಯಾ ಕಾಲಕ್ಕೆ ಜಿಲ್ಲಾಧಿಕಾರಿಗಳಿಗೆ, ಉಪ ವಿಭಾಗಾಧಿಕಾರಿಗಳಿಗೆ ತಲುಪದೆ ಇರುವುದರಿಂದ ಆ ಕಾರ್ಯಕ್ರಮ ಏನು ಖಾತೆಯಾಗದೆ ಪಡ ವಜಾ ಆಗದೆ, ಇರುವುದರಿಂದ ಆ ಕಾರ್ಯಕ್ರಮ ನಿಂತು ಹೋಗಿರುವುದರಿಂದ ಸರ್ಕಾರ ಇನ್ನು ಒಂದು ಡೇಟ್‌ನ್ನು ಫಿಕ್ಸ್ ಮಾಡಿ ಯಾವ ಯಾವ ಫೈಲ್‌ಗಳು ಬಾಕಿ ಇವೆ, ಆ ಫೈಲನ್ನು ತಕ್ಷಣದಲ್ಲಿ ಖಾತೆಯನ್ನು ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಎಲ್ಲಾ ಅರ್ಜಿಯನ್ನು ಕೊಟ್ಟು, ಹಣವನ್ನು ಕಟ್ಟಿ ಪಡ ವಜಾ ಆಗಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ.

+ ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಮತ್ತು ಕಂದಾಯ ಸಚಿವರು):– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಣ್ಣಯ್ಯನವರು ತಿಳಿಸಿರತಕ್ಕಂಥ ಹೇಳಿಕೆಯ ಬಗ್ಗೆ ಕರ್ನಾಟಕ ಭೂ ಕಂದಾಯ ನಿಯಮ 119 ರಡಿಯಲ್ಲಿ ಹಿಡುವಳಿದಾರರು ಭೂ ಕಂದಾಯದ ಬಾಕಿ ಹಣವನ್ನು ಪಾವತಿಸದೆ ಇದ್ದು, ಕರ್ನಾಟಕ ಭೂ ಕಂದಾಯ ಕಾಯಿದೆ ಸೆಕ್ಷನ್ 163ರ ಪ್ರಕಾರ ಸರ್ಕಾರದ ಪರವಾಗಿ ಜಮೀನನ್ನು ಮುಟ್ಟುಗೋಲು ಹಾಕಿಕೊಂಡ ಪ್ರಕರಣಗಳಲ್ಲಿ ಹಾಗೂ ಸರ್ಕಾರದ ಪರವಾಗಿ ಖರೀದಿ ಮಾಡಲಾದ ಮತ್ತು ಮುಟ್ಟುಗೋಲು ಹಾಕಲಾದ ಜಮೀನನ್ನು ಪುನಃ ಹಿಡುವಳಿದಾರರಿಗೆ ಖಾತೆ ಪುನರ್ ಸ್ಥಾಪಿಸುವ ಬಗ್ಗೆ ಕಾಯಿದೆಯಲ್ಲಿ ಅವಕಾಶ ಮಾಡಿ ಕೊಡಲಾಗಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್‌ಡಿ 103 ಎಲ್‌ಜಿಪಿ 94 ದಿನಾಂಕ: 29-4-1995 ರಂತೆ ಈ ಮೇಲ್ಕಂಡ ಜಮೀನುಗಳ ಖಾತೆ ಪುನರ್ ಸ್ಥಾಪನೆ ಬಗ್ಗೆ ಜಿಲ್ಲಾಧಿಕಾರಿಗಳ ಅಧಿಕಾರವನ್ನು ನೀಡಲಾಗಿದೆ. ಸದರಿ ಅಧಿಸೂಚನೆಯಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಪತ್ರಿಕಾ ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ನೀಡಿ ಅರ್ಹ ರೈತರಿಂದ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಜಿಲ್ಲೆಯಲ್ಲಿ ತಹಸೀಲ್ದಾರ್ ಮತ್ತು ಉಪ ವಿಭಾಗಾಧಿಕಾರಿಗಳಿಂದ 180 ಪ್ರಕರಣಗಳ ಖಾತೆ ಪುನರ್ ಸ್ಥಾಪನೆಗಾಗಿ ಬಂದಿದ್ದು, ಅದರಲ್ಲಿ 167 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ಉಳಿದ 13 ಪ್ರಕರಣಗಳಲ್ಲಿ ಈ ಕೆಳಕಂಡ ಕಾರಣಗಳಿಂದ ಅಂದರೆ, ವಾರುಸುದಾರರ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿದ್ದು

ಹಾಗೂ ಕೆಲವೊಂದು ದಾಖಲಾತಿ ಇಲ್ಲದಿದ್ದರಿಂದ ನಿಗಧಿತ ಅವಧಿಯಲ್ಲಿ ಖಾತೆ ಪುನರ್ ಸ್ಥಾಪನೆ ಮಾಡಲು ಸಾಧ್ಯವಾಗದೆ ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಅಧಿಕಾರದ ಅವಧಿಯನ್ನು ತಹಸೀಲ್ದಾರರು, ಉಪ ವಿಭಾಗಾಧಿಕಾರಿಗಳಿಗೆ ಮೂಲಕ ಸರ್ಕಾರವನ್ನು ಜಿಲ್ಲಾಧಿಕಾರಿಗಳು ಕೋರಿರುತ್ತಾರೆ. ಜಿಲ್ಲೆಗಳಲ್ಲಿ ಸ್ವೀಕರಿಸಲಾದ 180 ಅರ್ಜಿಗಳಲ್ಲಿ 167 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಇದು ಶೇಕಡ 93 ರಷ್ಟು ಪ್ರಗತಿಯಾಗಿರುವ ಅಂಶವನ್ನು ಗಮನಿಸಬಹುದಾಗಿದೆ. ಸರ್ಕಾರದ ನಿಯಮ 119ಕ್ಕೆ ಸೂಕ್ತ ತಿದ್ದುಪಡಿ ತರುವ ಬಗ್ಗೆ ಕಾನೂನು ಇಲಾಖೆಯೊಂದಿಗೆ ಸಮಾಲೋಚನೆ ನಡೆದಿರುತ್ತದೆ. ಈ ಖಾತೆ ಪುನರ್ ಸ್ಥಾಪನೆ ಮಾಡುವುದರ ಬಗ್ಗೆ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಇರುವುದರಿಂದ ಸರ್ಕಾರದ ಪಡ ನಿಂತಿದೆ. 1990ರಲ್ಲಿ ಒಂದು ಸಾರಿ ಮೂರು ವರ್ಷ ಅವಧಿ ಕಟ್ಟುವಂಥದ್ದು, ನಂತರ 1991ರಲ್ಲಿ ಇನ್ನು ಒಂದು ವರ್ಷ ಜಾಸ್ತಿ ಕೊಡಬೇಕೆಂದು ಒಟ್ಟು 4 ವರ್ಷ ಕೊಟ್ಟಿದೆ. 1996 ರವರೆಗೆ ಇದು ವಿಸ್ತರಣೆ ಮಾಡಬೇಕೆಂದು ಇವತ್ತು ಪ್ರಕರಣಗಳು ಇವೆ. ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ ಇಂತಹ ಒಂದು ಸರ್ಕಾರದ ಪಡ ಇರತಕ್ಕಂಥ ವ್ಯವಸ್ಥೆ ಇದೆ. ಇದರಲ್ಲಿ ಅವಧಿಯನ್ನು ವಿಸ್ತರಣೆ ಮಾಡಬೇಕು ಎನ್ನುವ ಉದ್ದೇಶ ಸರ್ಕಾರದ ಮುಂದಿದೆ. ಇವತ್ತು ಇದನ್ನು ಕಾನೂನು ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ರೂಲ್ಸ್‌ಗೆ ಸೂಟಬಲ್ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಸೆಕ್ಷನ್ 119ರಲ್ಲಿ ಅಧಿಕಾರ 6 ತಿಂಗಳು ಎಂದು ಕೊಟ್ಟಿದ್ದಾರೆ, ಅದಕ್ಕೋಸ್ಕರ 6 ತಿಂಗಳು ಮಾತ್ರ ಮಾಡಿರುತ್ತೇವೆ. ಫರ್ದರ್ ಎಕ್ಸ್‌ಟೆಂಡ್ ಮತ್ತೆ ನಾವು ಇವತ್ತಿನ ದಿವಸ ಇನ್ನು ಎರಡು ಮೂರು ವರ್ಷ ಕೊಡಬೇಕಾಗುತ್ತದೆ. ಕಾನೂನು ಇಲಾಖೆ ಮುಂದಿದೆ, ಅದಕ್ಕೆ ಈ ರೂಲ್ಸ್‌ಗೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಮತ್ತು ಉರ ವಿಭಾಗಾಧಿಕಾರಿಗಳಿಂದ ಈ ಬಗ್ಗೆ ಸರ್ಕಾರಕ್ಕೆ ಕೇಳಿದ್ದಾರೆ. ಇದಕ್ಕೆ ಅಮೆಂಡ್‌ಮೆಂಟ್ ತರುವಂಥದ್ದು. ಇದಕ್ಕೆ ಸೂಟೆಬಲ್ ಅಮೆಂಡ್‌ಮೆಂಟ್‌ತಂದರೂ ಕೂಡ ಅದರ ಅವಧಿಯ ವಿಸ್ತರಣೆ ಕಾರ್ಯವನ್ನು ಮುಂದೆ ಮಾಡಿ ಇವರಿಗೆ ಅನುಕೂಲ ಮಾಡಿಕೊಡಲಾಗುವುದು.

**(ಈ) ಉಳ್ಳಾಲ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ**

+ ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ):– ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಉಳ್ಳಾಲ ನಗರ ಪಂಚಾಯಿತಿಯು ಸುಮಾರು 70 ಸಾವಿರ ಜನಸಂಖ್ಯೆಗೂ ಹೆಚ್ಚಿದೆ. ಸುಮಾರು 15 ಸಾವಿರಕ್ಕಿಂತ ಹೆಚ್ಚು ಮನೆಗಳು ಇವೆ. ಹಾಗೂ ಮಂಡಲ್ ಪಂಚಾಯತಿ ಇರುವಾಗ ಇಡೀ ರಾಜ್ಯದಲ್ಲಿ ಉಳ್ಳಾಲ ಮಂಡಲ ಪಂಚಾಯಿತಿ ಅತಿ ದೊಡ್ಡದು. ಈಗಾಗಲೇ ಅದು ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರವಾಗಿ ಪರಿವರ್ತನೆಯಾಗಿದೆ. ನ್ಯಾಶನಲ್ ಹೈವೆ 17 ಈ ಕ್ಷೇತ್ರದಲ್ಲಿ ಹಾದು ಹೋಗುವಂಥದ್ದು. ಈ ಒಂದು ಕ್ಷೇತ್ರದಲ್ಲಿ ನೇತ್ರಾವತಿ ಮತ್ತು ಅರಬೀ ಸಮುದ್ರ ಇರುವುದರಿಂದ ಈ ಪೂರ್ತಿ ಭಾಗ ಉಪ್ಪು ನೀರು ಸಿಗುತ್ತದೆ. ಈ ಕ್ಷೇತ್ರದ ಜನರಿಗೆ ಬೋರ್‌ವೆಲ್ ನೀರು ದೊರಕುವುದು ಅಸಾಧ್ಯ. ನೀರು ಸಿಗುವುದರಿಂದ ಮತ್ತು ಬೆಳೆಯುತ್ತಿರುವ ನಗರವಾಗಿರುವುದರಿಂದ ತುಂಬೆವೆಂಟೆಡ್ ಡ್ಯಾಮ್ ಅಥವಾ ಮಂಗಳೂರು ಮಹಾನಗರ ಪಾಲಿಕೆಗೆ ಈಗಾಗಲೇ ತುಂಬೆವೆಂಟೆಡ್ ಡ್ಯಾಮ್‌ದಿಂದ ನೀರು ಒದಗಿಸುತ್ತಿದ್ದಾರೆ. ಆದ್ದರಿಂದ ನಾನು ರಾಜ್ಯಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ. ಮೊನ್ನೆ 6 ತಿಂಗಳ ಮುಂಚೆ ನಗರಾಭಿವೃದ್ಧಿ